ದೂರಶಿಕ್ಷಣ ನಿರ್ದೇಶನಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

ದೂರವಾಣಿ ೦೮೩೯೪-೨೧೦೨೦೦

ಇ-ಮೇಲ್ : dde.kuh@gmail.com


ಸಂಖ್ಯೆ:ಕವಿಹಂ:ದೂಶಿನಿ:ಸಂತ.ಗೃ:2018-19/2018-19 ದಿನಾಂಕ. 28.03.2019

## ಸೂಚನೆ

2018-19ನೇ ಶೈಕ್ಷಣಿಕ ಸಾಲಿನ ಎಂ.ಎ. ಚರಿತ್ರೆ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಈ ಮೂಲಕ ಸೂಚಿಸುವುದೇನೆಂದರೆ, **ಕೋರ್ಸ್‌ನ ಪ್ರತಿ ಪತ್ರಿಕೆಯ ಎರಡು ಸ್ವಲಿಖಿತ ಎ4 ಅಳತೆಯ ಕನಿಷ್ಠ 10 ಪುಟಗಳ ಗೃಹಲೇಖನಗಳನ್ನು** ಪ್ರತಿಯೊಬ್ಬ ವಿದ್ಯಾರ್ಥಿಯು ಕಡ್ಡಾಯವಾಗಿ ಸಿದ್ಧಪಡಿಸಿ **ದಿನಾಂಕ 30.05.2019ರ** ಒಳಗೆ ಸಲ್ಲಿಸಬೇಕು. ವಿವಿಧ ಅಧ್ಯಯನ ಮತ್ತು ವಿಸ್ತರಣ ಕೇಂದ್ರಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಆಯಾ ಅಧ್ಯಯನ ಮತ್ತು ವಿಸ್ತರಣ ಕೇಂದ್ರಗಳ ಮುಖ್ಯಸ್ಥರ ಮೂಲಕ ಸಲ್ಲಿಸುವುದು. ರೂ. 300.00ಗಳ **ದಂಡಸಹಿತ ಗೃಹಲೇಖನವನ್ನು ಸಲ್ಲಿಸಲು 15.06.2019**ರವರೆಗೆ ಕಾಲಾವಕಾಶ ಇರುತ್ತದೆ. ತಡವಾಗಿ ಸಲ್ಲಿಸಿದ ಗೃಹಲೇಖನಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. ವಿದ್ಯಾರ್ಥಿಗಳು ಸಕಾಲದಲ್ಲಿ ಗೃಹಲೇಖನಗಳನ್ನು ಸಲ್ಲಿಸದಿದ್ದಲ್ಲಿ ಈ ಸಂಬಂಧದ ಆಂತರಿಕ ಅಂಕಗಳನ್ನು ನೀಡದೆ ಫಲಿತಾಂಶ ಪ್ರಕಟಿಸಲಾಗುವುದು.

ಈ ಕೆಳಗಿನ ಐದು ಪತ್ರಿಕೆಗಳಲ್ಲಿ ಪ್ರತಿಯೊಂದರಲ್ಲೂ ಐದು ವಿಷಯಗಳನ್ನು ಕೊಡಲಾಗಿದೆ. ಇವುಗಳಲ್ಲಿ ಪ್ರತಿ ಪತ್ರಿಕೆಯಲ್ಲಿಯೂ ಎರಡು ವಿಷಯ ಕುರಿತು ಕಡ್ಡಾಯವಾಗಿ ಪ್ರತಿಯೊಂದು ವಿಷಯಕ್ಕೆ ಕನಿಷ್ಠ 10 ಪುಟಗಳ ಗೃಹಲೇಖನ ಬರೆಯಬೇಕು. ಪ್ರತಿಯೊಂದು ಪತ್ರಿಕೆಗೂ 10 ಅಂಕಗಳು ಇರುತ್ತವೆ. ಐದು ಪತ್ರಿಕೆಗಳಿಗೆ ಒಟ್ಟು 50 ಅಂಕಗಳಿರುತ್ತವೆ.

**ಗೃಹಲೇಖನ ಕಳುಹಿಸುವ ವಿಳಾಸ**

**ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ 583 276.**

**ಗೃಹಲೇಖನದ ವಿಷಯಗಳು**

**ಕೋರ್ಸ್ (ಪತ್ರಿಕೆ) - 1 : ಚರಿತ್ರೆ ಲೇಖನ ಪರಂಪರೆ**

1. ಗ್ರೀಕ್ ಮತ್ತು ರೋಮನ್ ಚರಿತ್ರೆ ಲೇಖನ ಸಂಪ್ರದಾಯಗಳ ಗುಣ ಲಕ್ಷಣಗಳನ್ನು ಚರ್ಚಿಸಿರಿ.
2. ಚರಿತ್ರೆಕಾರನಾಗಿ ಇಬನ್ ಖಾಲ್ದೂನ್‌ನ ಮಹತ್ವವನ್ನು ವಿವರಿಸಿರಿ.
3. ಜ್ಞಾನೋದಯ ಕಾಲದ ಚರಿತ್ರೆ ಲೇಖನ ಪರಂಪರೆಯನ್ನು ವಿವರಿಸಿರಿ.
4. ರಾಷ್ಟ್ರೀಯವಾದೀ ಚರಿತ್ರೆ ಲೇಖನ ಪರಂಪರೆಯನ್ನು ಕುರಿತು ಬರೆಯಿರಿ.

**ಕೋರ್ಸ್ (ಪತ್ರಿಕೆ) - 2 : ಪಾಶ್ಚಿಮಾತ್ಯ ನಾಗರಿಕತೆ**

1. ಗ್ರೀಕರ ಶ್ರೇಷ್ಠ ದಾರ್ಶನಿಕ ತತ್ತ್ವಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಪುನರುಜ್ಜೀವನದ ಮುಖ್ಯ ಲಕ್ಷಣಗಳನ್ನು ವಿವರಿಸಿ.
3. ಸಮಾಜವಾದ ಎಂದರೇನು? ಅದರ ಉಗಮ ಹಾಗೂ ಪ್ರಗತಿಯ ಕುರಿತು ಬರೆಯಿರಿ.
4. ಶೀತಲ ಸಮರೋತ್ತರ ಪ್ರಪಂಚದ ಮುಖ್ಯ ಬೆಳವಣಿಗೆಗಳನ್ನು 1990ರ ದಶಕದವರೆಗೆ ವಿವರಿಸಿ.

**ಕೋರ್ಸ್ (ಪತ್ರಿಕೆ) - 3 : ಭಾರತೀಯ ಚರಿತ್ರೆ: ಆಯ್ದ ವಿಷಯಗಳು**

1. ಹರಪ್ಪ ಜನರ ವ್ಯಾಪಾರ ಮತ್ತು ವಾಣಿಜ್ಯಗಳ ವಿಭಿನ್ನ ಅಂಶಗಳನ್ನು ಕುರಿತು ಚರ್ಚಿಸಿರಿ.
2. ಮೌರ್ಯರ ಪತನಕ್ಕೆ ಕಾರಣಗಳ ಕುರಿತ ವಾದಗಳನ್ನು ಸಮೀಕ್ಷಿಸಿರಿ.
3. ಸಮುದ್ರಗುಪ್ತನ ಜೀವನ ಮತ್ತು ಸಾಧನೆಯನ್ನು ವಿವರಿಸಿ.
4. ದೆಹಲಿ ಸುಲ್ತಾನರ ಆಡಳಿತ ಪದ್ಧತಿಯನ್ನು ಕುರಿತು ಒಂದು ಟಿಪ್ಪಣಿ ಬರೆಯಿರಿ.

**ಕೋರ್ಸ್ (ಪತ್ರಿಕೆ) - 4 : ದಕ್ಷಿಣ ಭಾರತದ ಚರಿತ್ರೆ: ಆಯ್ದ ವಿಷಯಗಳು**

1. ಶಾತವಾಹನರ ಕಾಲದ ನಗರ ಕೇಂದ್ರಗಳು ಹಾಗೂ ಅಲ್ಲಿ ನಡೆಯುತ್ತಿದ್ದ ವ್ಯಾಪಾರ ಚಟುವಟಿಕೆಗಳ ಕುರಿತು ಬರೆಯಿರಿ.
2. ಮಧ್ಯಯುಗೀನ ದಕ್ಷಿಣ ಭಾರತದ ಗುಡಿ ಕೈಗಾರಿಕೆಗಳು ಮತ್ತು ಅವುಗಳ ಸಂಘರ್ಷಗಳನ್ನು ಕುರಿತು ಚರ್ಚಿಸಿ.
3. ಬಸವಣ್ಣನ ಜೀವನ ಮತ್ತು ಸಾಧನೆಗಳನ್ನು ಪರಿಚಯಿಸಿರಿ.
4. ಭಾಷಾವಾರು ಪ್ರಾಂತ್ಯಗಳ ರಚನೆಯ ಕುರಿತಾಗಿ ಭಾರತ ಸರಕಾರವು ನೇಮಿಸಿದ ಆಯೋಗಗಳ ಕುರಿತು ಬರೆಯಿರಿ.

**ಕೋರ್ಸ್ (ಪತ್ರಿಕೆ) - 5 : ಕರ್ನಾಟಕ ಚರಿತ್ರೆ: ಆಯ್ದ ವಿಷಯಗಳು**

1. ಕರ್ನಾಟಕದ ಮೊದಲ ನಗರೀಕರಣದಲ್ಲಿ ವ್ಯಾಪಾರದ ಪಾತ್ರವನ್ನು ವಿಶ್ಲೇಷಿಸಿ.
2. ಕ್ರಿ.ಶ. 7ನೆಯ ಶತಮಾನದಿಂದ 10ನೆಯ ಶತಮಾನದವರೆಗಿನ ರಾಜವಂಶಗಳ ಚರಿತ್ರೆಯನ್ನು ನಿರೂಪಿಸಿ.
3. ವಚನ ಚಳವಳಿಯ ವಿಭಿನ್ನ ಆಯಾಮಗಳನ್ನು ಪರಿಶೀಲಿಸಿ.
4. ಏಕೀಕರಣೋತ್ತರ ಕರ್ನಾಟಕದಲ್ಲಿನ ಹಿಂದುಳಿದ ವರ್ಗಗಳ ಚಳವಳಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

ನಿರ್ದೇಶಕರು

E:dde:contact18-19/assrments/6